ಅ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಮಂಗಳೂರು ತಾಲ್ಲೂಕು ತಹಶೀಲ್ದಾರರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು 1-6-96 ರಿಂದ 31-5-97 ರವರೆಗೆ ಸಾರ್ವಜನಿಕರಿಂದ ಮತ್ತು ಜನಪ್ರತಿನಿಧಿಗಳಿಂದ ಸ್ವೀಕರಿಸಿದ ಮನವಿಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಇತ್ಯರ್ಥಪಡಿಸಿದ ಮನವಿಗಳ ಸಂಖ್ಯೆ ಮತ್ತು ಇತ್ಯರ್ಥವಾಗದೇ ಉಳಿದಿರುವ ಸಂಖ್ಯೆ.

ಇ) ಇತ್ಯರ್ಥವಾಗದೇ ಉಳಿದಿರಲು ಕಾರಣ -

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು)

ಅ)

	ಜಿಲ್ಲಾಧಿಕಾರಿಗಳ ಕಛೇರಿ	ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಕಛೇರಿ	ತಹಶೀಲ್ದಾರರ ಕಛೇರಿ
	8528	918	1435
ಆ)	8162	841	1066
	366	77	369
ಇ)	ಅಧೀನ ಕಛೇರಿಗಳಲ್ಲಿ ಮತ್ತು ಇತರ ಕಛೇರಿಗಳಲ್ಲಿ ತನಿಖಾ ಹಂತದಲ್ಲಿರುವುದು ಹಾಗೂ ಬಾಗಿ ಇರುವ ಪ್ರಕರಣಗಳು ಇತ್ತೀಚೆಗೆ ಸ್ವೀಕೃತಿಯಾಗಿರುತ್ತದೆ.	ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕೋರಿ ಬಂದಿರುವ ಮನವಿಗಳನ್ನು ಇತ್ಯರ್ಥಗೊಳಿಸಬೇಕಾದಲ್ಲಿ ಹೆಚ್ಚಿನ ಅನುದಾನ ಬೇಕಾಗಿದ್ದು ಅವುಗಳ ಬಗ್ಗೆ ಪ್ರಸ್ತಾವನೆ ಕೆಲವು ಮನವಿಗಳ ಬಗ್ಗೆ ಅಧೀನ ಕಾರ್ಯಾಲಯದಿಂದ ವರದಿ ಬರಬೇಕಾಗಿದೆ.	ತನಿಖಾ ಹಂತದಲ್ಲಿರುವುದು ಮತ್ತು ತಕರಾರು ಪ್ರಕರಣಗಳು ಮತ್ತು ಆಕ್ಷೇಪ ಪ್ರಕರಣಗಳಿಂದ ಬಾಕಿ ಇರುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಭೂಸಾರ ಸಂರಕ್ಷಣೆಯಲ್ಲಾದ ಅವ್ಯವಹಾರಗಳು.

1623 - ಡಾ. ಎಂ.ಪಿ. ಕರ್ಕಿ (ಕುಮಟ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 1993-94, 1994-95, 1005-96ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂಸಾರ ಸಂರಕ್ಷಣೆ ಇಲಾಖೆಯಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಈ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದೇ?

3) ಈಗಾಗಲೇ ಕ್ರಮ ಕೈಗೊಂಡಲ್ಲಿ ವಿವರ ನೀಡುವುದು.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

1) ಇಲ್ಲ ಆದಾಗ್ಯೂ 1990-91 ರಿಂದ 1995-96 ರವರೆಗೆ ಒಟ್ಟು 14.43 ಲಕ್ಷ ರೂ.ಗಳ ಮೊತ್ತದ 373 ಕಾಮಗಾರಿಗಳು ಬಾರಿ ಮಳೆಯಿಂದಾಗಿ ಹಾನಿಗೊಳಗಾಗಿದೆ. ಈ ಕಾಮಗಾರಿಗಳ ನಿರ್ವಹಣೆಯನ್ನು ಇಲಾಖೆಯಿಂದ ಮಾಡಿಸಲು ಅವಕಾಶವಿರುವುದಿಲ್ಲ ಫಾಲಾನುಬವಿಗಳನ್ನು ಸೇರಿಸಿಕೊಂಡು ದುರಸ್ತಿ ಮಾಡಿಸಲಾಗಿದೆ.

2) "ಅನ್ವಯಿಸುವುದಿಲ್ಲ"

3) "ಅನ್ವಯಿಸುವುದಿಲ್ಲ"

ಅಕ್ರಮ ಸಾಗುವಳಿ ಭೂಮಿಗಳ ಕುರಿತು.

1624 - ಡಾ|| ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ಯರ್ಥವಾಗದೆ ಬಾಕಿ ಉಳಿದಿರುವ ಅಕ್ರಮ ಸಾಗುವಳಿ ಭೂಮಿ ಸಕ್ರಮೀಕರಣಕ್ಕಾಗಿ ಬಂದಿದ್ದ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಇದುವರೆವಿಗೂ ಎಷ್ಟು ಅರ್ಜಿಗಳು ಇತ್ಯರ್ಥವಾಗಿದೆ, ಇನ್ನು ಎಷ್ಟು ಅರ್ಜಿಗಳು ಇತ್ಯರ್ಥವಾಗದೆ ಬಾಕಿ ಉಳಿದಿದೆ.

ಇ) ಬಾಕಿ ಉಳಿದಿರುವ ಅರ್ಜಿಗಳ ವಿಲೇವಾರಿಗಾಗಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಮತ್ತು ಆ) ಒಟ್ಟು ಸ್ವೀಕೃತಿಯಾದ ಅರ್ಜಿಗಳ ಸಂಖ್ಯೆ : 10,86,826

ಒಟ್ಟು ಇತ್ಯರ್ಥವಾಗಿರುವ ಅರ್ಜಿಗಳ ಸಂಖ್ಯೆ : 7,71,473

ಆ) ಒಟ್ಟು ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ : 3,15,353

ಇ) ಆದಷ್ಟು ಬೇಗ ವಿಲೇವಾರಿ ಮಾಡುವಂತೆ ಎಲ್ಲಾ ತಾಲ್ಲೂಕು ಸಮಿತಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.